CC 136/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 06.06.2026.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ವಿ ಇ ಡಿ ವಕೀಲರಿಂದಃ**

ಪ್ರಶ್ನಿತ ಚೆಕ್ ಆರೋಪಿಯ ಅಲ್ಲ ಎಂದರೆ ಸರಿಯಲ್ಲ. ನಾನು ಬೇರೆಯವರ ಚೆಕ್ಕನ್ನು ಆರೋಪಿಯ ಚೆಕ್ ಎಂದು ಹೇಳಿ ಅವರ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 10 ಎಕರೆ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ಹೆಸರಿಗೆ ಸದರಿ ಜಮೀನು ಬಂದಿರುತ್ತದೆ. ಅದಕ್ಕಿಂತ ಪೂರ್ವದಲ್ಲಿ ನನ್ನ ಮತ್ತು ನನ್ನ ತಂದೆಯ ಹೆಸರಿನಲ್ಲಿ ಇತ್ತು. ನನ್ನ ತಂದೆಯ ಹೆಸರಿನಲ್ಲಿ 10 ಎಕರೆ ಮತ್ತು ನನ್ನ ಹೆಸರಿನಲ್ಲಿ 1 ಎಕರೆ 20 ಗುಂಟೆ ಇರುತ್ತದೆ. ನನ್ನ ತಂದೆಯ ಹೆಸರು ಬಸವರಾಜಪ್ಪ ಎ ಎಸ್. ಹೊದಿಗೆರೆ ಗ್ರಾಮದ ಸ.ನಂ. 45/7 ಜಮೀನು ನನಗೆ ಸಂಬಂಧಿಸಿದ್ದು. ಈ ಜಮೀನನ್ನು ಬಿಟ್ಟರೆ ನನ್ನ ಹೆಸರಿನಲ್ಲಿ ಹೊದಿಗೆರೆಯಲ್ಲಿ ಸ.ನಂ. 45/ಪಿ2 ಇರುತ್ತದೆ. ಸ.ನಂ. 45/ಪಿ2 ರಲ್ಲಿ 30 ಗುಂಟೆ ಜಮೀನು ಇರುತ್ತದೆ. ಸಂಪೂರ್ಣ 10 ಎಕರೆ ಜಮೀನು ನನ್ನ ತಂದೆಯ ಮರಣದ ನಂತರ ನನಗೆ ಬಂದಿರುತ್ತದೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ನಡುವೆ ನೇರವಾಗಿ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಯಾವತ್ತು ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಪ್ರಶ್ನಿತ ಚೆಕ್ ಆರೋಪಿಯ ಚೆಕ್ ಅಲ್ಲದೇ ಇದ್ದರು ಸಹ ನಾನು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.
**ಮರು ವಿಚಾರಣೆಃ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**